## IIPL ನಲ್ಲಿ ಜಾಣ ಹೂಡಿಕೆಯ ಪರಿಕಲ್ಪನೆ

ಉತ್ತಮ ನಾಗರಿಕರಿಗೆ ರಿಯಲ್ ಎಸ್ಟೇಟ್ ಹೂಡಿಕೆಯಲ್ಲಿ ನೆರವಾಗುವ ಮೂಲಕ ಅವರ ಭವಿಷ್ಯಕ್ಕೆ ಭದ್ರತೆ ಒದಗಿಸುವ ತುಡಿತವನ್ನು ಕಂಪನಿ ಹೊಂದಿದೆ. ನಮ್ಮ ಹೂಡಿಕೆದಾರರು ಭೂಮಿ ಖರೀದಿ ಪ್ರಕ್ರಿಯೆಯ ಯಾವ ಅಡಚಣೆಯೂ ಇಲ್ಲದೆ ನಿಶ್ಚಿಂತರಾಗಿ ಇರಬಹುದು. ರಾಷ್ಟ್ರದಲ್ಲಿ ಕ್ಷಿಪ್ರವಾಗಿ ಬೆಳೆಯುತ್ತಿರುವ ನಗರರಗಳ ಹೊರವಲಯಗಳಲ್ಲಿ ಭೂಮಿ ಗುರುತಿಸಲು ನಮ್ಮ ತಂಡ ಪರಿಶ್ರಮಿಸಲಿದೆ. ನಗರೀಕರಣ ಹಾಗೂ ಕೈಗಾರಿಕಾ ಪ್ರಗತಿಯಿಂದ ನಗರರಗಳ ವ್ಯಾಪ್ತಿ ವಿಸ್ತರಣೆಯಾಗಿ ನಾವು ಖರೀದಿಸಿದ ಭೂಮಿಯ ಬೆಲೆ ತೀವ್ರವಾಗಿ ಏರಲಿದೆ. ಈ ಮೂಲಕ ಬಂದ ಲಾಭವನ್ನು ನಮ್ಮ ಗ್ರಾಹಕರೊಂದಿಗೆ, ಅವರ ಹೂಡಿಕೆಗೆ ಅನುಗುಣವಾದ ಪ್ರಮಾಣದಲ್ಲಿ ಹಂಚಲಾಗುವುದು.

ಈಗಾಗಲೇ (IIFS) ಪ್ರೈವೇಟ್ ಲಿಮಿಟೆಡ್ ಕಂಪನಿಯನ್ನು ಮುನ್ನಡಿಸುತ್ತಿರುವ ಅನುಭವದ ಹಿನ್ನೆಲೆಯಲ್ಲಿ, IIPL ತನ್ನ ಹೂಡಿಕೆದಾರರೊಂದಿಗೆ ಪಾರದರ್ಶಕವಾದ ಮುಕ್ತ ಸಂಬಂಧ ಹೊಂದುವ ಸಂಕಲ್ಪ ಮಾಡಿದೆ. ಭೂಮಿ ಗುರುತಿಸುವ, ಸೂಕ್ತ ಕಾನೂನು ಸಲಹೆಯೊಂದಿಗೆ ದಾಖಲೆಗಳನ್ನು ಪರಿಶೀಲಿಸುವ, ಖರೀದಿಸಿದ ಜಾಗಕ್ಕೆ ಭದ್ರತೆ ಒದಗಿಸುವ, ಭೂಪರಿವರ್ತನೆ ಮಾಡಿಸುವ ಹಾಗೂ ಭೂ ಅಭಿವೃದ್ಧಿಯ ಜವಾಬ್ದಾರಿಗಳನ್ನು ಕಂಪನಿ ನಿರ್ವಹಿಸಲಿದೆ. ರಾಷ್ಟ್ರದ ಮೆಟ್ರೋ ನಗರರಗಳಲ್ಲಿ ಕಳೆದ 11 ವರ್ಷಗಳಲ್ಲಿ ಭೂಮಿಯ ಬೆಲೆ 25 ಪಟ್ಟಿಗಿಂತಲೂ ಅಧಿಕವಾಗಿರುವುದನ್ನು ಮನಗಂಡಿರುವ ಕಂಪನಿಯು ತನ್ನ ಗ್ರಾಹಕರಿಗೆ ರಿಯಲ್ ಎಸ್ಟೇಟ್ ಹೂಡಿಕೆಯ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನೂ ಮಾಡಲಿದೆ.

ನಿಮ್ಮ ಸಹಭಾಗಿತ್ವವು ನಿಮ್ಮನ್ನು ನಿಮ್ಮಭ್ಯುದಯೆಡೆಗೆ ಹಾಗೂ ಭದ್ರತೆಯೆಡೆಗೆ ಕೊಂಡೊಯ್ಯುತ್ತದೆ ಜತೆಗೆ ಮಾನವ ಕಲ್ಯಾಣವನ್ನೂ ಉತ್ತೇಜಿಸುತ್ತದೆ ನಿಮ್ಮ ಹೂಡಿಕೆಯು ಅಧಿಕ ಮೌಲ್ಯವರ್ಧಿತ ಫಲಶ್ರುತಿ ನೀಡುವುದು ನಿಶ್ಚಿತ ಇನ್‌ಸ್ಪೈರ್ ಇಂಡಿಯಾ ಪ್ರಾಪರ್ಟೀಸ್ ಲಿಮಿಟೆಡ್ ಜತೆ ನೆಲಿ, ನಿಮಗೆ ಸುಸ್ವಾಗತ

"ಖರೀದಿಸುವುದಕ್ಕೆ ಕಾದು ನೋಡುವ ಬದಲು ಖರೀದಿಸಿದ ನಂತರ ಕಾದು ನೋಡಿ"

ಇದು ಇನ್‌ಸ್ಪೈಯ್ಯರ್ ಇಂಡಿಯಾ ಪ್ರಾಪರ್ಟೀಸ್ ಲಿಮಿಟೆಡ್‌ನ ಹೂಡಿಕೆಯ ಮಂತ್ರ.

ಆಡಳಿತ ಮಂಡಳಿ

### ಬಾಲಕೃಷ್ಣನ್ ವಿ.– ಅಧ್ಯಕ್ಷರು

'ವಿದ್ಯಾರತ್ನ' ಎಂದೇ ಜನಪ್ರಿಯರಾದ ಶ್ರೀ ಬಾಲಕೃಷ್ಣನ್ ಅವರು ಇನ್‌ಸ್ಪೈರ್ ಇಂಡಿಯಾ ಪ್ರಾಪರ್ಟೀಸ್ ಲಿಮಿಟೆಡ್ ಅಧ್ಯಕ್ಷರಾಗಿದ್ದಾರೆ. ಬಿಜಿನೆಸ್ ಅಡ್ಮಿನಿಸ್ಟ್ರೇಷನ್ ಪದವೀಧರರಾದ ಇವರು ಹೋಟೆಲ್ ಮ್ಯಾನೆಜ್‌ಮೆಂಟ್ ಅಂಡ್ ಕೇಟರಿಂಗ್ ಟೆಕ್ನಾಲಜಿಯಲ್ಲಿ ಡಿಪ್ಲೊಮಾ ವ್ಯಾಸಂಗವನ್ನು ಮಾಡಿದ್ದಾರೆ. ಲೀಡರ್ಸ್ ಅಕಾಡೆಮಿ ಫಾರ್ ಪರ್ಸನಲ್ ಸಕ್ಸಸ್‌ನ (ಲ್ಯಾಪ್ಸ್) ಮುಖ್ಯ ಮಾರ್ಗದರ್ಶಕರೂ ಆಗಿದ್ದಾರೆ.

ಲೀಡರ್ಸ್ ಅಕಾಡೆಮಿ ಫಾರ್ ಪರ್ಸನಲ್ ಸಕ್ಸಸ್ ಹೆಸರಿನಲ್ಲಿ ಬೆಂಗಳೂರು, ಮುಂಬೈ, ಬರೋಡ, ಚೆನ್ನೈ, ಕೊಚ್ಚಿನ್, ಮಂಗಳೂರು, ಬೆಳಗಾವಿ, ಹೈದರಾಬಾದ್ ಮತ್ತಿತರ ಕಡೆಗಳಲ್ಲಿ ಸಮಗ್ರ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. 2002ರಲ್ಲಿ ಅತ್ಯುತ್ತಮ ಭಾಷಣಕಾರ ಹಾಗೂ 2003ರಲ್ಲಿ ಅತ್ಯುತ್ತಮ ಆಶುಭಾಷಣ ಪಟು ಪ್ರಶಸ್ತಿಗಳಿಗೆ ಅವರು ಪಾತ್ರರಾಗಿದ್ದಾರೆ.

ಕಾರ್ಪೋರೆಟ್ ಕಂಪನಿಗಳಲ್ಲಿ ನಾಯಕತ್ವ ಕೌಶಲ್ಯಗಳನ್ನು ಬೆಳೆಸುವ ತರಬೇತಿ ಕಾರ್ಯಕ್ರಮಗಳನ್ನು ಅವರು ನಡೆಸುತ್ತಿದ್ದಾರೆ. 'ನೆನಪು, ಅಧ್ಯಯನ ಕೌಶಲ್ಯ ಮತ್ತು ಹಸ್ತಾಕ್ಷರ ಸಾಮುದ್ರಿಕ' ಕುರಿತು 90ಕ್ಕೂ ಹೆಚ್ಚು ಕಾಲೇಜು, ಶಾಲೆ ಮತ್ತು ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ.

ವ್ಯಕ್ತಿತ್ವ ನಿರ್ಮಾಣ ಕುರಿತು ಆರು ವಿವಿಧ ಭಾಷೆಗಳಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಿರುವ ಏಕೈಕ ಮಾರ್ಗದರ್ಶಕರಾಗಿರುವ ಅವರು, ಈವರೆಗೆ 10 ಲಕ್ಷಕ್ಕೂ ಹೆಚ್ಚು ಜನರಿಗೆ ಉಪನ್ಯಾಸ ನೀಡಿರುವ ಅವರು ರಾಷ್ಟ್ರದ ವಿವಿಧೆಡೆ ಭಿನ್ನ ಕ್ಷೇತ್ರಗಳ 30,000ಕ್ಕೂ ಹೆಚ್ಚು ಜನರನ್ನು ತರಬೇತುಗೊಳಿಸಿದ್ದಾರೆ.

### ಶರಣ್ ಸಿ.ಪಾಟೀಲ್– ವ್ಯವಸ್ಥಾಪಕ ನಿರ್ದೇಶಕರು

ಶ್ರೀ ಶರಣ್ ಅವರು ಒಬ್ಬ ಯಶಸ್ವಿ ಎಕ್ಸಿಕ್ಯುಟಿವ್ ಹಾಗೂ ಸಮಗ್ರ ಹಣಕಾಸು ಹೂಡಿಕೆ ಯೋಜನೆ (TFIP) ಮತ್ತು ಹೂಡಿಕೆ ಯೋಜನೆಗಳ ನಿರ್ವಹಣಾ ತಜ್ಞರಾಗಿದ್ದಾರೆ. ಹಣಕಾಸು ಹೂಡಿಕೆ ತರಬೇತಿದಾರರೂ ಆಗಿರುವ ಅವರು ರಾಷ್ಟ್ರದ ವಿವಿಧ ನಗರ ಹಾಗೂ ಪಟ್ಟಣಗಳಲ್ಲಿ ಈವರೆಗೆ 10,000ಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದ್ದಾರೆ. ಹೆಸರಾಂತ ಕಾರ್ಪೋರೆಟ್ ಕಂಪನಿಗಳು ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ಪರಿವರ್ತನಾ ತರಬೇತಿ ಕಾರ್ಯಕ್ರಮಗಳನ್ನೂ ನಿಯಮಿತವಾಗಿ ನಡೆಸಿಕೊಡುತ್ತಿದ್ದಾರೆ. ಷೇರು, ಮ್ಯೂಚುಯಲ್ ಫಂಡ್, ಕಮಾಡಿಟಿ (ವಾಯದಾ ವಹಿವಾಟು), ವಿದೇಶಿ ವಿನಿಮಯ (ಫಾರೆಕ್ಸ್), ಐಮೆ, ರಿಯಲ್ ಎಸ್ಟೇಟ್, ತೆರಿಗೆ ಗಳಿಕೆ, SIP ಮತ್ತಿತರ ವಿಷಯಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ನೀಡುವುದಕ್ಕೆ ಹೆಸರಾಗಿದ್ದಾರೆ.

ಅಂತರರಾಷ್ಟ್ರೀಯ ಕಮಾಡಿಟಿ ವಿನಿಮಯ ಕೇಂದ್ರದಲ್ಲಿ (ICE) ಹಣಕಾಸು ವಿಶ್ಲೇಷಕರಾಗಿ (ಫೈನಾನ್ಷಿಯಲ್ ಅನಲಿಸ್ಟ್) ವೃತ್ತಿ ಆರಂಭಿಸಿದ ಅವರಿಗೆ ಅಗಾದ ಪ್ರಮಾಣದಲ್ಲಿ ಭಾರಿ ಕಮಾಡಿಟಿ ಹೂಡಿಕೆ ಯೋಜನೆಗಳನ್ನು ನಿರ್ವಹಿಸಿದ ಅನುಭವವಿದೆ. ಈ ಅನುಭವದ ಹಿನ್ನೆಲೆಯಲ್ಲಿ ಹೆಚ್ಚೆಚ್ಚು ಜನರನ್ನು ತಲುಪುವ ಉದ್ದೇಶದಿಂದ ನಂತರ ತಮ್ಮದೇ ಕಂಪನಿ "ಇನ್‌ಸ್ಪೈರ್ ಇಂಡಿಯಾ ಫೈನಾನ್ಷಿಯಲ್ ಸಲ್ಯೂಷನ್ಸ್ ಲಿಮಿಟೆಡ್ ಆರಂಭಿಸಿದರು.

ಅವರ ನೇತೃತ್ವದಲ್ಲಿ(IIFS) ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಪಾತ್ರವಾಗಿದೆ:

ಅಖಿಲ ಭಾರತ ಮಟ್ಟದಲ್ಲಿ *ಎಮರ್ಜಿಂಗ್ ಸ್ಟಾರ್*ಅತ್ಯಧಿಕ ಮಾರಾಟ ಮತ್ತು ಹೊಸ ಉತ್ಪನ್ನಗಳ ಮಾರಾಟ* ಅತ್ಯುತ್ತಮ ವ್ಯಾಪಾರ ನೀತಿ ಪರಿಪಾಲನೆ*ವಲಯ ಮಟ್ಟದಲ್ಲಿ ಅತ್ಯಧಿಕ ಸಂಖ್ಯೆಯ ಎಸ್‌ಐಪಿ

ರಾಷ್ಟ್ರದ ಜನರಿಗೆ ಆರ್ಥಿಕ ಸ್ವಾವಲಂಬನೆ ದೊರಕಿಸಿಕೊಡಬೇಕೆಂಬ ತುಡಿತ ಅವರದ್ದಾಗಿದೆ. ತಮ್ಮ ಗ್ರಾಹಕರಿಗೆ ಹೂಡಿಕೆ ಯೋಜನೆ ಕುರಿತು ವೈಯಕ್ತಿಕ ಸಲಹೆ ನೀಡಲು ಅವರು ಹಾಗೂ ಅವರ ನುರಿತ ತಂಡ ಒತ್ತು ನೀಡುತ್ತದೆ.

"ದೊಡ್ಡ ಕನಸು ಕಾಣಿ, ಅದನ್ನು ಜಾಣತನದಿಂದ ಸಾಕಾರಗೊಳಿಸಿ, ಪ್ರಾಮಾಣಿಕವಾಗಿರಿ"- ಎಂಬುದು ಅವರ ಯಶಸ್ವಿನ ಮಂತ್ರವಾಗಿದೆ.

### ಕೃಷ್ಣಪ್ಪ ಸಿ.– ನಿರ್ದೇಶಕರು

ಶ್ರೀ ಕೃಷ್ಣಪ್ಪ ಅವರು ಬೆಂಗಳೂರು ಮೂಲದ ರಮಾನಂದ್ ಕನ್‌ಸ್ಟ್ರಕ್ಷನ್ಸ್‌ನಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಹುದ್ದೆಯೊಂದಿಗೆ 1997ರಲ್ಲಿ ವೃತ್ತಿಜೀವನ ಆರಂಭವಾಯಿತು. ನಂತರ, 2000ನೇ ಇಸವಿಯಲ್ಲಿ ಬೃಹತ್ ರಿಯಲ್ ಎಸ್ಟೇಟ್ ಯೋಜನೆಗಳನ್ನು ಕೈಗೆತ್ತುವ ಮೂಲಕ ಅವರು ಸ್ವತಃ ಉದ್ಯಮಿಯಾಗಿ ಬೆಳೆಯಲು ಆರಂಭಿಸಿದರು.

ನಂತರ, ಅವರ ಕಂಪನಿ ಜಿಜಿಎಂಪಿ, ಜಿಡಿಎ, ರೈಲ್ವೆ ಇಲಾಖೆ ಹಾಗೂ ಇನ್ನಿತರ ಪ್ರತಿಷ್ಠಿತ ಸರ್ಕಾರಿ ಇಲಾಖೆಗಳಲ್ಲಿ ಸಿವಿಲ್ ಎಂಜಿನಿಯರಿಂಗ್ ಗುತ್ತಿಗೆಗಳನ್ನು ಪಡೆಯುವಲ್ಲಿ ಯಶಸ್ವಿಯಾಯಿತು.

ಶುದ್ಧಹಸ್ತದ ಉನ್ನತ ಕಂಟ್ರಾಕ್ಟರ್ ಆದ ಅವರು ತಮ್ಮ ವ್ಯವಹಾರದಲ್ಲಿ ಪಾರದರ್ಶಕತೆ ಕಾಪಾಡಿಕೊಂಡಿರುವುದಕ್ಕೆ ಹೆಸರಾಗಿದ್ದಾರೆ. ಬೆಂಗಳೂರಿನಲ್ಲಿ 'ನಾರ್ಥ್‌ಗೇಟ್ ಪ್ರಾಪರ್ಟೀಸ್ ಲಿಮಿಟೆಡ್" ಎಂಬ ಕಂಪನಿಯ ಸಹಭಾಗಿತ್ವದಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣದ ಸಾಹಸಕ್ಕೂ ಅವರು ಮುಂದಾಗಿದ್ದಾರೆ.

ರಾಷ್ಟ್ರೀಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ 2004ರಲ್ಲಿ ಏರ್ಪಡಿಸಿದ್ದ ಮೇಳಕ್ಕೆ ಮಾಡಿದ್ದ ವ್ಯವಸ್ಥೆಗಾಗಿ ಅತ್ಯುತ್ತಮ ಸಂಘಟಕ ಪ್ರಶಸ್ತಿ ಅವರಿಗೆ ಸಂದಿದೆ. ಕಳೆದ ಕೆಲವು ವರ್ಷಗಳಿಂದ ಅವರು ಲೀಡರ್ಸ್ ಅಕಾಡೆಮಿ ಫಾರ್ ಪರ್ಸನಲ್ ಸಕ್ಸಸ್‌ನ ಭಾಗವಾಗಿದ್ದಾರೆ.

ರಾಷ್ಟ್ರದ ಮಧ್ಯಮ ವರ್ಗದ ಜನತೆಯ ಆರ್ಥಿಕ ಪ್ರಗತಿಯಲ್ಲಿ ಹಾಗೂ ಯುವಕರಿಗೆ ಉದ್ಯೋಗ ಸೃಷ್ಟಿಸುವಲ್ಲಿ ರಿಯಲ್ ಎಸ್ಟೇಟ್ ಬಹು ದೊಡ್ಡ ಪಾತ್ರ ವಹಿಸುತ್ತದೆ ಎಂಬುದು ಅವರ ನಂಬಿಕೆ.

### ದಾನೇಶ್ ಐ.ತಡಸಲೂರ್– ನಿರ್ದೇಶಕರು

ರಸಗೊಬ್ಬರ, ಬೀಜ, ಕ್ರಿಮಿನಾಶಕ ಇತ್ಯಾದಿ ಕೃಷಿ ಪೂರಕ ಉತ್ಪನ್ನಗಳ ಮಾರಾಟದ ಮೂಲಕ 1992ರಲ್ಲಿ ಅವರಿಗೆ ಕಾರ್ಪೋರೇಟ್ ರಂಗದೊಂದಿಗೆ ನಂಟು ಬೆಳೆಯಿತು. ನಂತರ 2002ರಲ್ಲಿ ತಮ್ಮ ವ್ಯಾಪಾರ ಕ್ಷೇತ್ರವನ್ನು ವಿಸ್ತರಿಸಿಕೊಂಡ ಅವರು APMCಯಲ್ಲಿ ಆಹಾರ ಧಾನ್ಯಗಳ ವಹಿವಾಟಿಗೆ ಮುಂದಾದರು. ಅದಾದ ಮೇಲೆ ಜಾನುವಾರು ಮೇಲಿನ ವ್ಯಾಪಾರಕ್ಕೂ ಪ್ರವೇಶಿಸಿದರು. ಕಳೆದ 20 ವರ್ಷಗಳಿಂದ ಒಬ್ಬ ಯಶಸ್ವಿ ವರ್ತಕರಾಗಿರುವ ಅವರು, ಅಲ್ಲಿಂದ ಹಿಂದಕ್ಕೆ ಹಿನ್ನಡೆಯ ಹೆಜ್ಜೆ ಇಟ್ಟಿದ್ದೇ ಇಲ್ಲ.

ಮುಧೋಳ್ ಸಹಕಾರ ಬ್ಯಾಂಕ್ ನಿಯಮಿತದ ಉಪಾಧ್ಯಕ್ಷರಾಗಿ ಐದು ವರ್ಷಗಳ ಕಾಲ (2003-2008) ಕಾರ್ಯನಿರ್ವಹಿಸಿದ ಅನುಭವ ಅವರಿಗಿದೆ. ಬಾಗಲಕೋಟೆಯ ಬಸವೇಶ್ವರ ಸಹಕಾರ ಬ್ಯಾಂಕ್ ಮತ್ತು ಜಿಲ್ಲೆಗಿಯ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್‌ಗಳ ಸಲಹಾ ಸಮಿತಿ ಸದಸ್ಯರಲ್ಲಿ ಇವರೂ ಒಬ್ಬರಾಗಿದ್ದಾರೆ. ಇತ್ತೀಚಿನ ತಂತ್ರಜ್ಞಾನ ಮತ್ತು ಕೃಷಿ ಪರಿಕರಗಳ ಬಗ್ಗೆ ರೈತರಿಗೆ ಅರಿವು ಮೂಡಿಸಿ ಗುಣಮಟ್ಟದ ಹಾಗೂ ಹೆಚ್ಚು ಇಳುವರಿಯ ಆಹಾರ ಉತ್ಪಾದನೆಗೆ ನೆರವಾಗಬೇಕೆಂಬ ಗುರಿಯನ್ನು ಹೊಂದಿದ್ದಾರೆ.

ರೈತರು ಆರ್ಥಿಕ ಭದ್ರತೆ ಗಳಿಸುವ ಜೊತೆಗೆ ರಾಷ್ಟ್ರದಲ್ಲಿನ ಕೃಷಿ ಪೂರಕ ವ್ಯಾಪಾರವನ್ನು ಮುಂದಿನ ಸ್ತರಕ್ಕೆ ಕೊಂಡೊಯ್ಯಬೇಕೆಂಬುದು ಅವರ ಕನಸು.

ಉಲ್ಲೇಖ : ಬಗ್ಗಿವಲ್ಲಿ ಬಲಿದಿದೆ

"ದೇವರು ಮಾನವರ ಸೃಷ್ಟಿಯನ್ನು ನಿಲ್ಲಿಸುವುದಿಲ್ಲ
ಆದರೆ ಅವನು ಭೂಮಿಯ ಮೇಲಿನ ನೆಲದ ಸೃಷ್ಟಿಯನ್ನು ನಿಲ್ಲಿಸಿದ್ದಾನೆ"

# INSPIRE INDIA
PROPERTIES LTD

*DREAMZ 2 REAL'TY*

**ವಿಳಾಸ:**
# 19, ರಾಧಕೃಷ್ಣ ಸದನಂ,
(ಎಚ್‌ಡಿಎಫ್‌ಸಿ ಬ್ಯಾಂಕ್ ಮೇಲ್ಭಾಗ) 2ನೇ ಮಹಡಿ,
ಗಾಂಧಿ ಬಜಾರ್ ಮುಖ್ಯರಸ್ತೆ,
ಬಸವನಗುಡಿ, ಬೆಂಗಳೂರು- 560004

**ಬೆಂಗಳೂರು :**
ಫೋನ್ : +91-080-26616095 / 42129917
ಮೊಬೈಲ್ : +91-9241262739

**ಬೆಳಗಾವಿ :**
ಶಿವ ಬಸವ ಸದನ
ಕೋಲ್ಹಾಪುರ ಅಡ್ಡರಸ್ತೆ, ಪಿ.ಬಿ. ರಸ್ತೆ
ಬೆಳಗಾವಿ - 590016.
ಫೋನ್ : +91-831-4216417
E-mail : info@inspireindiaproperties.com
Web : www.inspireindiaproperties.com



## ರಿಯಲ್ ಎಸ್ಟೇಟ್‌ನಲ್ಲಿ ಏಕೆ ಹೂಡಿಕೆ?

1. ರಿಯಲ್ ಎಸ್ಟೇಟ್ ಪ್ರಸ್ತುತ ರಾಷ್ಟ್ರದ ಜಿಡಿಪಿ ಗೆ ಶೇ 5ರಷ್ಟು ಕೊಡುಗೆ ನೀಡುತ್ತಿದೆ. ಈಗ ಈ ಉದ್ದಿಮೆಯ ಗಾತ್ರ 50 ಶತಕೋಟಿ ಡಾಲರ್‌ಗಳು (250 ಸಾವಿರ ಕೋಟಿ ರೂಪಾಯಿಗಳು). 2020 ರ ವೇಳೆಗೆ ಈ ಗಾತ್ರ 180 ಶತಕೋಟಿ ಡಾಲರ್‌ಗಳಾಗಿ (ಸುಮಾರು 900 ಸಾವಿರ ಕೋಟಿ ರೂಪಾಯಿಗಳಾಗಿ) ಏರುವ ನಿರೀಕ್ಷೆ ಇದೆ.
2. ಕೃಷಿಯ ನಂತರ ರಾಷ್ಟ್ರದಲ್ಲಿ ಅತ್ಯಂತ ಹೆಚ್ಚು ಉದ್ಯೋಗಗಳನ್ನು ನೀಡುತ್ತಿರುವ ಕ್ಷೇತ್ರ ಇದಾಗಿದೆ. ಈ ಉದ್ದಿಮೆಯು ಸಿಮೆಂಟ್, ಇಟ್ಟಿಗೆ, ಉಕ್ಕು ಸೇರಿದಂತೆ ಸುಮಾರು 250 ಇತರ ಉದ್ದಿಮೆಗಳೊಂದಿಗೆ ಬೆಸೆದುಕೊಂಡಿದೆ.
3. ಮಧ್ಯಮಾವಧಿ/ದೀರ್ಘಾವಧಿಯಲ್ಲಿ ರಿಯಲ್ ಎಸ್ಟೇಟ್‌ನಿಂದ ಹೆಚ್ಚು ಲಾಭ ಪಡೆಯುವ ನಿರೀಕ್ಷೆ ಇದೆ.
4. ಇತರ ರೀತಿಯ ಹೂಡಿಕೆಗಳಿಗೆ ಹೋಲಿಸಿದರೆ ರಿಯಲ್ ಎಸ್ಟೇಟ್ ಗರಿಷ್ಠ ಲಾಭ ಗಳಿಸಿಕೊಟ್ಟಿದೆ.
5. ಪ್ರಸ್ತುತ ಪರಿಸ್ಥಿತಿಯಲ್ಲಿ ರಿಯಲ್ ಎಸ್ಟೇಟ್ ದರ ಇಳಿದಿರುವುದು ಹೂಡಿಕೆ ಮಾಡಲು ಬಯಸುವವರಿಗೆ ಪ್ರಶಸ್ತ ಸಮಯವಾಗಿದೆ.

## ರಾಷ್ಟ್ರದಲ್ಲಿ ರಿಯಲ್ ಎಸ್ಟೇಟ್ ಬೆಳವಣಿಗೆ

1. ಅತ್ಯಧಿಕ ವೆಚ್ಚ ಮಾಡುವ ಸಾಮರ್ಥ್ಯವಿರುವ ಯುವಜನತೆಯ ಸಂಖ್ಯೆ ರಾಷ್ಟ್ರದಲ್ಲಿ ಅಧಿಕವಾಗಿದೆ.
2. ಜಗತ್ತಿನ ಶೇ 25 ರಷ್ಟು ಯುವಜನತೆ ಭಾರತವೊಂದರಲ್ಲೇ ಇದ್ದಾರೆ.
3. ರಾಷ್ಟ್ರದ ಜನಸಂಖ್ಯೆಯಲ್ಲಿ 25 ವರ್ಷದವರಿಗಿಂತ ಒಳಗಿನವರ ಸಂಖ್ಯೆ 54% ಇದೆ.
4. 2015 ರ ವೇಳೆಗೆ ರಾಷ್ಟ್ರದ ಉತ್ಪಾದಕ ವಯೋಮಾನದವರ ಜನಸಂಖ್ಯೆ, ಅಂದರೆ 25 ರಿಂದ 44 ವಯೋಮಾನದೊಳಗಿನವರ ಸಂಖ್ಯೆ 9 ಕೋಟಿಯಷ್ಟು ಹೆಚ್ಚಾಗಲಿದೆ.
5. ಸಾಮಾಜಿಕ ಆರ್ಥಿಕ ಸೂಚಕಗಳಾದ ಸಾಕ್ಷರತೆ, ಅವಲಂಬನೆ ಅನುಪಾತ ಇತ್ಯಾದಿಗಳು ಸಕಾರಾತ್ಮಕ ಗತಿಯಲ್ಲಿವೆ.







**India witnessing sharp rise in high/middle income households, while having one of the lowest mortgage penetration rates**




**ಉಲ್ಲೇಖ:**

"ಜನಸಂಖ್ಯೆಯ ಸತತ ಏರಿಕೆ ಹಾಗೂ ಎಂದೂ ವಿಸ್ತರಣೆಯಾಗದ ಭೂಮಿ, ಇದು ಬೇಡಿಕೆ- ಪೂರೈಕೆಯ ನಡುವೆ ಅಗಾಧ ಅಂತರ ಉಂಟು ಮಾಡುತ್ತದೆ. ಇದರಿಂದಾಗಿ ಭೂಮಿಯ ಮೇಲಿನ ಹೂಡಿಕೆ ನಿರಂತರವಾಗಿ ಏರುಮುಖವಾಗುತ್ತದೆ. ರಿಯಲ್ ಎಸ್ಟೇಟ್ : ಬಂಡವಾಳ ಹೂಡಿಕೆಗೆ ವಿಫುಲ ಅವಕಾಶ"

## ರಾಷ್ಟ್ರದ ಮಧ್ಯಮ/ಅಧಿಕ ಆದಾಯ ಕುಟುಂಬಗಳಲ್ಲಿ ಏರಿಕೆ

ರಾಷ್ಟ್ರದ ಕುಟುಂಬಗಳ ಆದಾಯಮಟ್ಟ (ಶೇಕಡಾವಾರು), ಸಂಖ್ಯೆ (ದಶಲಕ್ಷಗಳಲ್ಲಿ) ಕಡಿಮೆ ಆದಾಯ, ಮಧ್ಯಮ ಆದಾಯ, ಅಧಿಕ ಆದಾಯ.

ವಿವಿಧ ರಾಷ್ಟ್ರಗಳಲ್ಲಿ ಅಡಮಾನು ಪ್ರಮಾಣ ಜಿಡಿಪಿಯಲ್ಲಿ ಅಡಮಾನು ಪ್ರಮಾಣದ ಶೇಕಡಾವಾರು ಭಾರತ, ಚೀನಾ, ಕೊರಿಯಾ, ಥಾಯ್‌ಲ್ಯಾಂಡ್, ಮಲೇಷಿಯ, ಸಿಂಗಪುರ, ತೈವಾನ್, ಹಾಂಕಾಂಗ್, ಜರ್ಮನಿ, ಅಮೆರಿಕ, ಫ್ರಾನ್, ಡೆನ್ಮಾರ್ಕ್ ರಾಷ್ಟ್ರದಲ್ಲಿ ಅಧಿಕ/ಮಧ್ಯಮ ಆದಾಯದ ಕುಟುಂಬಗಳ ಸಂಖ್ಯೆ ತೀವ್ರವಾಗಿ ಏರುತ್ತಿದೆ. ಇದೇ ವೇಳೆ ಅಡಮಾನು ಪ್ರಮಾಣ ಅತ್ಯಂತ ಕಡಿಮೆ ಇದೆ.

## ರಿಯಲ್ ಎಸ್ಟೇಟ್ : ಬಂಡವಾಳ ಹೂಡಿಕೆಗೆ ವಿಫುಲ ಅವಕಾಶ

ಮುಂಚೂಣಿ ರಿಯಲ್ ಎಸ್ಟೇಟ್ ಕಂಪನಿಯೊಂದು ರಾಷ್ಟ್ರದ ರಾಜಧಾನಿ ವಲಯದಲ್ಲಿ (NCR) 1990ರಲ್ಲಿ ಪ್ರತಿ ಎಕರೆಗೆ 1 ಲಕ್ಷ ರೂಪಾಯಿಗೂ ಕಡಿಮೆ ದರದಲ್ಲಿ ಜಮೀನು




ಉಲ್ಲೇಖ : ಗುರಿ ನಿಮ್ಮದು, ದಾರಿ ನಮ್ಮದು!

ಖರೀದಿಸಿತು. ಈಗ ಅದೇ ಕಂಪನಿ ಪ್ರತಿ ಚದುರ ಅಡಿಗೆ 10,000 ರೂಪಾಯಿಗೂ ಅಧಿಕ ದರದಲ್ಲಿ ಭೂಮಿ ಮಾರಾಟ ಮಾಡುತ್ತಿದೆ. ಅಂದರೆ, ಆಗ ಕಂಪನಿ ಪ್ರತಿ ಚದುರ ಅಡಿಗೆ ನೀಡಿದ್ದ ಹಣ ಸುಮಾರು 2 ರೂಪಾಯಿ ಮಾತ್ರ. ಈಗ ಅಷ್ಟೇ ಜಾಗಕ್ಕೆ ರೂ 10,000 ಬೆಲೆ ಇದೆ.

ರಾಷ್ಟ್ರದ ಎಲ್ಲೆಡೆ ಇದೇ ಪರಿಸ್ಥಿತಿ ಕ್ಷಿಪ್ರವಾಗಿ ನಿರ್ಮಾಣವಾಗುತ್ತಿದೆ. ರಾಷ್ಟ್ರದಲ್ಲಿನ ಪ್ರಮುಖ ಕಂಪನಿಗಳೆಲ್ಲಾ ತಮ್ಮ ಮುಂದಿನ 7 ರಿಂದ 10 ವರ್ಷಗಳ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಾದ ಭೂಮಿಯನ್ನು ಈಗಾಗಲೇ ಹೊಂದಿವೆ.

## ವಾಣಿಜ್ಯ ಚಟುವಟಿಕೆಗಳ ಆರಂಭ

ಎರಡು/ ಮೂರನೇ ಶ್ರೇಣಿಯ ನಗರಗಳಲ್ಲಿ ತಮ್ಮ ಚಟುವಟಿಕೆಗಳನ್ನು ವಿಸ್ತರಿಸುವ ಉದ್ದೇಶ ಹೊಂದಿರುವ ಕಂಪನಿಗಳು ರಾಷ್ಟ್ರದ ಎರಡು/ ಮೂರನೇ ಶ್ರೇಣಿಯ ನಗರಗಳ ಕಡೆಗೆ ಹೆಜ್ಜೆನ ಗಮನ ನೀಡುತ್ತೀರುವುದರಿಂದ ಈ ನಗರಗಳಲ್ಲಿ ರಿಯಲ್ ಎಸ್ಟೇಟ್‌ಗೆ ಅಗಾಧ ಬೇಡಿಕೆ ಬರುತ್ತಿದೆ

ಎರಡನೇ, ಮೂರನೇ ಶ್ರೇಣಿಯ ನಗರಗಳಲ್ಲಿ IT/ ITES ಉದ್ದಿಮೆಗಳನ್ನು ವಿಸ್ತರಿಸುವ ಉದ್ದೇಶ ಹೊಂದಿರುವ ಕಂಪನಿಗಳು ರಾಷ್ಟ್ರದ ಎರಡು/ ಮೂರನೇ ಶ್ರೇಣಿಯ ನಗರಗಳ ಕಡೆಗೆ ಹೆಜ್ಜೆನ ಗಮನ ನೀಡುತ್ತಿವೆ.

## ಕಾಮೆಂಟ್‌ಗಳು

ಭೂಮಿಗೆ ಅಧಿಕ ದರ, ಕಾರ್ಮಿಕ ವೆಚ್ಚ, ಮೂಲಸೌಲಭ್ಯ ವೆಚ್ಚಗಳನ್ನು ತಗ್ಗಿಸಿಕೊಳ್ಳುವ ಸಲುವಾಗಿ ಕಂಪನಿಗಳು ಎರಡನೇ/ ಮೂರನೇ ಶ್ರೇಣಿಯ ನಗರಗಳಲ್ಲಿ ಉದ್ದಿಮೆ ಸ್ಥಾಪಿಸುವ ಚಿಂತನೆ ಮಾಡುತ್ತಿವೆ.

ಮೈಸೂರು, ಕೊಯಮತ್ತೂರು, ವಿಶಾಖಪಟ್ಟಣಂ, ಜೈಪುರ, ಚಂಡೀಗಡದಂತಹ ನಗರಗಳಲ್ಲಿ ರಿಯಲ್ ಎಸ್ಟೇಟ್‌ಗೆ ಬೇಡಿಕೆ ಹೆಚ್ಚುವ ಸಾಧ್ಯತೆ ಇದೆ.

ನಾಸ್‌ಕಾಮ್ ಅಂದಾಜಿನ ಪ್ರಕಾರ, ಎರಡನೇ/ ಮೂರನೇ ಶ್ರೇಣಿಯ ನಗರಗಳಲ್ಲಿ IT/ ITES ಉದ್ದಿಮೆಗಳು ಅಧಿಕವಾಗುವ ನೀರಿಕ್ಷೆಇದೆ.

## ನಮ್ಮ ಕುರಿತು:

ರಾಷ್ಟ್ರದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಯಾವುದೇ ಅಡೆತಡೆ, ಅಡಚಣೆಗಳಿಲ್ಲದೆ, ಹೂಡಿಕೆ ಮಾಡುವ ಕನಸು ಹೊಂದಿರುವವರಿಗೆ ನೆರವಾಗುವ ಪ್ರಮುಖ ಉದ್ದೇಶದಿಂದ ಇನ್‌ಸ್ಪೈರ್ ಇಂಡಿಯಾ ಪ್ರಾಪರ್ಟೀಸ್ ಅಮಿಮೆಡ್ (IIPL) ಕಂಪನಿಯನ್ನು ಸ್ಥಾಪಿಸಲಾಗಿದೆ. ರಿಯಲ್ ಎಸ್ಟೇಟ್‌ನಲ್ಲಿ ಮಿತ ಪ್ರಮಾಣದ (ಕನಿಷ್ಠ) ಹೂಡಿಕೆಯೊಂದಿಗೆ ಮುಂದಾಗಲು ಕಂಪನಿಯು ವ್ಯವಸ್ಥಿತ ಹಾಗೂ ವೃತ್ತಿಪರ ಸಲಹೆ ನೀಡಲಿದೆ. ಆಯ್ದ ಪ್ರಾಜೆಕ್ಟ್‌ಗಳಲ್ಲಿ ಹೂಡಿಕೆ ಮಾಡುವ ಮೂಲಕ ತನ್ನ ಗ್ರಾಹಕರಿಗೆ ಅವರ ಹೂಡಿಕೆಗೆ ಅನುರುಣವಾಗಿ ಲಾಭಗಳಿಸುವ ಅವಕಾಶವನ್ನು ಕಂಪನಿ ಒದಗಿಸುತ್ತದೆ. ಕೆಲವು ವರ್ಷಗಳ ನಂತರ ಲಾಭದೊಂದಿಗೆ ಬರುವ ಅಧಿಕ ಹಣವನ್ನು ಗ್ರಾಹಕರು ತಮ್ಮಿಷ್ಟದ ರಿಯಲ್ ಎಸ್ಟೇಟ್ ಯೋಜನೆಯಲ್ಲಿ ಹೂಡಲು ಅನುಕೂಲವಾಗುತ್ತದೆ.

ನಿಪುಣ ವೃತ್ತಿಪರರು ಕಂಪನಿಯ ಆಡಳಿತ ಮಂಡಳಿ ಸದಸ್ಯರಾಗಿದ್ದಾರೆ. ಇವರೊಂದಿಗೆ ಕೆಲಸ ಮಾಡುವುದಕ್ಕೆ ರಾಷ್ಟ್ರದ ಶ್ರೇಷ್ಠ ಬಿಜಿನೆಸ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳು, ಚಾರ್ಟರ್ಡ್ ಅಕೌಂಟೆಂಟ್‌ಗಳು, ಕಾನೂನು ಸಲಹೆಗಾರರು, ಸಂಶೋಧಕರು ಹಾಗೂ ಮಾರುಕಟ್ಟೆ ವೃತ್ತಿಪರರ ತಂಡವೂ ಸಜ್ಜಾಗಿದೆ.

ನಿಮ್ಮ ಸಂಪತ್ತನ್ನು ವೃದ್ಧಿಸಿಕೊಳ್ಳುವ ಬಯಕೆ ನಿಮ್ಮದಾಗಿದ್ದಲ್ಲಿ ನಮ್ಮೊಂದಿಗೆ ನಿಮ್ಮ ಕೈಜೋಡಿಸಿ. ಆ ಮೂಲಕ, ನಿಮ್ಮ ಕನಸು ನನಸಾಗುವ ಹಾದಿಯಲ್ಲಿ ಭಾಗಿಯಾಗಲು ನಮಗೂ ಅವಕಾಶ ನೀಡಿ. ನಮ್ಮ ಬಗ್ಗೆ ಹೆಚ್ಚೆಚ್ಚು ತಿಳಿಯಲು ಪ್ರಯತ್ನಿಸಿ. ಅಷ್ಟೇ ಅಲ್ಲ, ನಿಮ್ಮ ಕನಸುಗಳು ಹಾಗೂ ಗುರಿಯ ಬಗ್ಗೆ ನಮಗೆ ಅಖತವಾಗಿಯೂ ತಿಳಿಸಬಹುದು.

ನಿಮ್ಮಲ್ಲಿರುವ ಉಳಿತಾಯದ ಹಣವನ್ನು ರಿಯಲ್ ಎಸ್ಟೇಟ್ ಉದ್ದಿಮೆಯಲ್ಲಿ ತೊಡಗಿಸಿ, ಸಂಪತ್ತು ಅಧಿಕಗೊಳಿಸಿಕೊಳ್ಳುವ ಹಂಬಲ ನಿಮ್ಮದಾಗಿದ್ದಲ್ಲಿ IIPL ನಲ್ಲಿ ಹೂಡಿಕೆ ಮಾಡಬೇಕೆಂಬ ನಿಮ್ಮ ನಿರ್ಧಾರ ಅತ್ಯಂತ ಸೂಕ್ತ. "ನಿಮ್ಮ ಆರ್ಥಿಕ ಸ್ವಾವಲಂಬನೆಯ ಕನಸನ್ನು ನನಸಾಗಿಸುವಲ್ಲಿ ನಾವು ನಿಮಗೆ ಪ್ರಾಮಾಣಿಕ, ಪಾರದರ್ಶಕ ಹಾಗೂ ಅತ್ಯಂತ ವೃತ್ತಿಪರ ರೀತಿಯಲ್ಲಿ ನೆರವು ನೀಡುತ್ತೇವೆ" ಎಂಬ ಸಂಕಲ್ಪದೊಂದಿಗೆ ನಮ್ಮ ಬಾಂಧವ್ಯಕ್ಕೆ ಮುನ್ನುಡಿ ಬರೆಯೋಣ.

ಇನ್‌ಸ್ಪೈರ್ ಇಂಡಿಯಾ ಪ್ರಾಪರ್ಟೀಸ್ ಅಮಿಮೆಡ್ (IIPL) ವೃತ್ತಿಪರ ನಿರ್ವಹಣೆಯ ರಿಯಲ್ ಎಸ್ಟೇಟ್ ಹೂಡಿಕೆಯ ಸಲಹಾ ಸಂಸ್ಥೆಯಾಗಿದೆ. ನಮ್ಮ ಬಂಡವಾಳ ವಿನಿಯೋಗ ಸ್ವರೂಪವನ್ನು ಕೂಲಂಕಷವಾಗಿ ಪರಿಶೀಲಿಸಲು ಹಾಗೂ ನಿಮ್ಮ ಅಗತ್ಯಗಳನ್ನು ನಮ್ಮ ಗಮನಕ್ಕೆ ತರಲು ನಿಮ್ಮನ್ನು ಕೋರುತ್ತೇವೆ. ಎಷ್ಟಾದರೂ, ಸಮಾನ ಮನಸ್ಕರೊಂದಿಗೆ ಸಂಪರ್ಕದಿಂದಿರಲು ನಾವು ಯಾವಾಗಲೂ ಇಚ್ಛಿಸುತ್ತೇವೆ.

## ಮುನ್ನೋಟ

| | | |
|---|---|---|
| **ಜನರಿಗಾಗಿ** | : | ಆರೋಗ್ಯಕರ, ಪಾರದರ್ಶಕವಾದ ಹಾಗೂ ಕಂಪನಿಯ ಎಲ್ಲ ಸಿಬ್ಬಂದಿಗೂ ಸಮಾನ ಅವಕಾಶ ಕಲ್ಪಿಸುವ ವಾತಾವರಣದ ನಿರ್ಮಾಣ |
| **ಹೂಡಿಕೆ ಯೋಜನೆಗಳು** | : | ತನ್ನ ಗ್ರಾಹಕರಿಗೆ ಲಭ್ಯವಿರುವ ಅತ್ಯುತ್ತಮ ರಿಯಲ್ ಎಸ್ಟೇಟ್ ಹೂಡಿಕೆಗೆ ಹಾಗೂ ಯಾವುದೇ ಅಡಚಣೆ ಇಲ್ಲದೆ ಸಂಪತ್ತಿನ ವೃದ್ಧಿಗೆ ಅವಕಾಶ ಕಲ್ಪಿಸುವುದು |
| **ಗ್ರಾಹಕರು** | : | ರಿಯಲ್ ಎಸ್ಟೇಟ್ ಹೂಡಿಕೆಗೆ ಅತ್ಯುತ್ತಮ ಸನ್ನಿವೇಶ ಸೃಷ್ಟಿಸುವ ಮೂಲಕ ಗ್ರಾಹಕರ ಕನಸು ನನಸಾಗಿಸಿ, ಅವರ ವಿಶ್ವಾಸ ಗಳಿಸುವುದು |
| **ಸಲಹೆಗಾರಿಕೆ** | : | ರಿಯಲ್ ಎಸ್ಟೇಟ್ ಹೂಡಿಕೆಯ ಸಕಾರಾತ್ಮಕ ಅಂಶಗಳ ಕುರಿತು ಜನರಲ್ಲಿ ಅರಿವು ಮೂಡಿಸುವ ರಾಷ್ಟ್ರದ ಅತಿ ದೊಡ್ಡ ಜಾಲವಾಗುವುದು |
| **ಲಾಭದಾಯಕತೆ** | : | ನಿಯಮಬದ್ಧ ವ್ಯವಹಾರದ ಮೂಲಕ ನಮ್ಮ ಷೇರುದಾರರಿಗೆ ಅರ್ಥಪೂರ್ಣ ಹಾಗೂ ಸುಸ್ಥಿರ ಸಂಪತ್ತು ಸೃಷ್ಟಿಸುವುದು |
| **ಸಾಮಾಜಿಕ** | : | ಜನಸಮೂಹಕ್ಕೆ ಆರ್ಥಿಕ ಸ್ವಾವಲಂಬನೆ ಗಳಿಸಿಕೊಳ್ಳಲು ಹಾಗೂ ಆ ಮೂಲಕ ಸಂತಸಮಯ ರಾಷ್ಟ್ರ ನಿರ್ಮಾಣಕ್ಕೆ ನೆರವಾಗುವುದು |

## ಧ್ಯೇಯ

- ಗ್ರಾಹಕರಿಗೆ ಗಣನೀಯ ಪ್ರಮಾಣದ ಸಂಪತ್ತು ಸೃಷ್ಟಿಸುವ ಉದ್ದೇಶದಿಂದ ಆಕರ್ಷಕ ರಿಯಲ್ ಎಸ್ಟೇಟ್ ಯೋಜನೆಗಳಲ್ಲಿ ಬಂಡವಾಳ ತೊಡಗಿಸುವುದು.
- ಉತ್ತಮ ನಾಗರಿಕರೊಂದಿಗೆ ಕೈಜೋಡಿಸಿ, ಅವರಿಗೆ ಯಾವುದೇ ಅಡಚಣೆ ಇಲ್ಲದೇ ರಿಯಲ್ ಎಸ್ಟೇಟ್‌ನಲ್ಲಿ ಬಂಡವಾಳ ಹೂಡಲು ಅವಕಾಶ ಕಲ್ಪಿಸುವುದು.
- ಬೆಳವಣಿಗೆಯ ಸಾಧ್ಯತೆಗಳನ್ನು ಗುರುತಿಸಿ ಅಭಿವೃದ್ಧಿಯತ್ತ ಹೆಜ್ಜೆ ಹಾಕಿರುವ ರಾಷ್ಟ್ರದ ವಿವಿಧ ನಗರಗಳಲ್ಲಿ ಹೂಡಿಕೆ ಮಾಡುವುದು.
- ಕೆಲವು ವರ್ಷಗಳ ನಂತರ ಬರುವ ಲಾಭವನ್ನು ತಮ್ಮ ಹೂಡಿಕೆ ಪ್ರಮಾಣಕ್ಕೆ ಅನುಗುಣವಾಗಿ ಗ್ರಾಹಕರೊಂದಿಗೆ ಹಂಚಿಕೊಳ್ಳುವುದು
- ಪಾರದರ್ಶಕವಾಗಿ ವ್ಯವಹಾರ ನಡೆಸಿ ನಿರಂತರ ಬೆಳವಣಿಗೆ ದಾಖಲಿಸುವುದು

ಉಲ್ಲೇಖ: 'ಖರೀದಿಸುವುದಕ್ಕೆ ಕಾದು ನೋಡುವ ಬದಲು ಖರೀದಿಸಿದ ನಂತರ ಕಾದು ನೋಡಿ"